ದಿನಾಂಕಃ 05.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಯು ಎಸ್ ಕೆ ವಕೀಲರಿಂದ**

1. ದಾವಾ ಜಮೀನಿಗೆ ಸಂಬಂಧಿಸಿದಂತೆ ನನ್ನ ಮತ್ತು ಪ್ರತಿವಾದಿಯ ನಡುವೆ ಕಾನೂನು ಬದ್ಧ ವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಈಗಾಗಲೆ ವಿಭಾಗ ಆಗಿದ್ದು ಆದರೆ ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಪೋಡಿಯಾಗಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಇಂದಿಗೂ ಸಹ ಮೃತ ವಾದಿ ಮತ್ತು ಪ್ರತಿವಾದಿ ಹೆಸರಿನಲ್ಲಿ ಪಹಣಿ ಪತ್ರಿಕೆಯಲ್ಲಿ ಸಾಮೂಹಿಕ ಅಥವಾ ಜಂಟಿ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮತ್ತು ನನ್ನ ತಂದೆ ದಾವಾ ಜಮೀನನ್ನು ವಿಭಾಗಮಾಡಿಕೊಂಡು ಪ್ರತ್ಯೇಕವಾಗಿ ವಹಿವಾಟು ಮಾಡುತ್ತಿದ್ದು ಆದರೆ ಪಹಣಿ ಪತ್ರಿಕೆಯಲ್ಲಿ ಪೋಡಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಮೃತ ಪ್ರತಿವಾದಿಯು ದಾವಾ ಜಮೀನನ್ನು ವಿಭಾಗಮಾಡಿಕೊಂಡ ಬಗ್ಗೆ ಪಟ್ಟಾ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಇಂದಿನವರೆಗೂ ನನ್ನ ಮತ್ತು ಪ್ರತಿವಾದಿಯ ನಡುವೆ ವಿಭಾಗವೇ ಆಗಿಲ್ಲ ಎಂದರೆ ಸರಿಯಲ್ಲ.

2. ದಾವಾ ಜಮೀನಿನಲ್ಲಿ ಇರುವ ಎರಡು ಕೊಳವೆ ಬಾವಿಗಳನ್ನು ಪ್ರತಿವಾದಿಯೇ ತೆಗೆಸಿರುತ್ತಾನೆ ಎಂದರೆ ಸಾಕ್ಷಿಯು ನಾನು ತೆಗೆಸಿರುತ್ತೇನೆ ಎಂದು ನುಡಿಯುತ್ತಾರೆ. ಎರಡು ಕೊಳವೆ ಬಾವಿಗಳ ಪೈಕಿ ಒಂದು ಕೊಳವೆ ಬಾವಿಯನ್ನು ಸುಮಾರು 2 ವರ್ಷಗಳ ಹಿಂದೆ ತೆಗೆಸಿದ್ದು ಮತ್ತೊಂದು ಕೊಳವೆ ಬಾವಿಯನ್ನು ಸುಮಾರು 5-6 ವರ್ಷದ ಹಿಂದೆ ತೆಗೆಸಿರುತ್ತೇನೆ. ಪ್ರತಿವಾದಿಯ ಎರಡು ಕೊಳವೆ ಬಾವಿಗಳ ಪೈಕಿ ಒಂದು ಕೊಳವೆ ಬಾವಿಯನ್ನು ದಿನಾಂಕಃ 15.11.2008 ರಂದು ಮತ್ತು ಮತ್ತೊಂದು ಕೊಳವೆ ಬಾವಿಯನ್ನು ದಿನಾಂಕಃ 28.02.2016 ರಂದು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಪ್ರತಿವಾದಿಯನ್ನು 2009 ರಲ್ಲಿ ಪಡೆದಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಎರಡು ಕೊಳವೆ ಬಾವಿಗಳನ್ನು ಇಂದಿಗೂ ಸಹ ಪ್ರತಿವಾದಿಯೇ ಉಪಯೋಗಿಸುತ್ತಿದ್ದಾನೆ ಎಂದರೆ ಸಾಕ್ಷಿಯು ಅದನ್ನು ಉಪಯೋಗಿಸುವ ಸಲುವಾಗಿ 2013 ರಿಂದಲೂ ವಾದಿ ಮತ್ತು ಪ್ರತಿವಾದಿಯ ನಡುವೆ ತಂಟೆ ಇದ್ದು ಅವುಗಳನ್ನು ಉಪಯೋಗಿಸಲು ನಾನು ಹೋದರೆ ನನ್ನ ವಿರುದ್ಧ ಜಗಳ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ಪ್ರತಿವಾದಿಗೆ ಪ್ರಸ್ತುತ 70-80 ವರ್ಷ ವಯಸ್ಸಾಗಿದೆ ಎಂದರೆ ಸರಿ. ಕಳೆದ 3-4 ವರ್ಷದಿಂದ ಅವರಿಗೆ ಆರೋಗ್ಯ ಚೆನ್ನಾಗಿಲ್ಲದೇ ಇರುವುದರಿಂದ ಆಗಾಗಿ ಆಸ್ಪತ್ರೆಯ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಗೆ 70-80 ವರ್ಷಗಳು ಆಗಿರುವುದರಿಂದ ಮತ್ತು ಆರೋಗ್ಯವು ಚೆನ್ನಾಗಿಲ್ಲದೇ ಇರುವುದರಿಂದ ಆತನು ನನಗಾಗಲೀ ಅಥವಾ ನನ್ನ ತಂದೆಗಾಗಲೀ ಯಾವುದೇ ತೊಂದರೆ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯು ತೊಂದರೆ ನೀಡದೇ ಇದ್ದರೂ ಆತನ ಮಕ್ಕಳು ಮತ್ತು ಹೆಂಡತಿಯು 2013 ರಿಂದಲೂ ತೊಂದರೆ ನೀಡುತ್ತಿದ್ದಾರೆ ಎಂದು ನುಡಿಯುತ್ತಾರೆ.

4. ಪ್ರತಿವಾದಿ ಮತ್ತು ಮೃತ ತಂದೆಯ ನಡುವೆ ಆದ ಮೌಖಿಕ ಮಾತುಗಳಂತೆ ದಾವಾ ಆಸ್ತಿಯ ಪೈಕಿ ಪಶ್ಚಿಮ ದಿಕ್ಕಿನ 01 ಎಕರೆ 38 ಗುಂಟೆ ಜಮೀನನ್ನು ಪ್ರತಿವಾದಿಯು ವಹಿವಾಟು ಮಾಡುತ್ತಿದ್ದು ಮತ್ತು ನನ್ನ ತಂದೆ ಪೂರ್ವ ದಿಕ್ಕಿನ ಉಳಿಕೆ 1 ಎಕರೆ 36 ಗುಂಟೆ ಜಮೀನನ್ನು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಾನು ಮತ್ತು ನನ್ನ ತಂದೆ ಉತ್ತರ ಭಾಗದ 01 ಎಕರೆ 36 ಗುಂಟೆ ಜಮೀನನ್ನು ಮತ್ತು ದಕ್ಷಿಣ ಭಾಗದ ಉಳಿಕೆ 01 ಎಕರೆ 38 ಗುಂಟೆ ಜಮೀನನ್ನು ಪ್ರತಿವಾದಿಯು ವಹಿವಾಟು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಪಶ್ಚಿಮ ಭಾಗದ 01 ಎಕರೆ 38 ಗುಂಟೆ ಜಮೀನಿನಲ್ಲಿ ಎರಡು ಬೋರವೆಲ್ ಗಳನ್ನು ತೆಗೆಸಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

5. 1986 ರಲ್ಲಿ ನನ್ನ ತಂದೆ ಮೃತ ವಾದಿ ಮತ್ತು ಪ್ರತಿವಾದಿಯ ನಡುವೆ ಅಪಸಾತ್ ವಾಟ್ನಿಯಾದ ಪ್ರಕಾರ ಡ ಸಂಖ್ಯೆ-1517 ರಂತೆ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನಾನು ಆ ಸಮಯಕ್ಕೆ ಚಿಕ್ಕವಯಸ್ಸಿನವನು ಇದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2000 ನೇ ಇಸ್ವಿಯಲ್ಲಿ ಸವಣೂರಿನ ಕಂದಾಯ ಕಚೇರಿಗೆ ಬೆಂಕಿ ಬಿದ್ದುದ್ದರಿಂದ ಸದರಿ ಡ ನಮೂದು ಸುಟ್ಟು ಹೋಗಿರುತ್ತದೆ ಎಂದರೆ ಗೊತ್ತಿಲ್ಲ. ಸದಡಿ ಡ ನಮೂದು ಸುಟ್ಟು ಹೋದ ಸಂಗತಿಯನ್ನು ದುರುಪಯೋಗಪಡಿಸಿಕೊಂಡು ಪ್ರಸ್ತುತ ಸುಳ್ಳು ದಾವೆಯನ್ನು ನನ್ನ ತಂದೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವೆಗೆ ಸಂಬಂಧಿಸಿದ ಯಾವುದೇ ಮಾಹಿತಿ ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.